15 ವರ್ಷಗಳ ಹಿಂದೆ ಒಂದು ಸಾಧಾರಣ ಕಂಪನಿಯ ಕ್ರಿಕೆಟ್ ಬ್ಯಾಟ್‌ಗಾಗಿ ಪರದಾಡುತ್ತಿದ್ದ ಆಲ್‌ರೌಂಡರ್ ರವೀಂದ್ರ ಜಡೇಜ ಈಗ, 21ನೇ ಶತಮಾನದ ಭಾರತದ ಶ್ರೇಷ್ಠ ಟೆಸ್ಟ್ ಕ್ರಿಕೆಟಿಗ ಎಂದು ‘ವಿಸ್ಡನ್’ ನಿಯತಕಾಲಿಕೆ ಗುರ್ತಿಸಿದೆ. ಖಾಸಗಿ ಭದ್ರತಾ ಸಿಬ್ಬಂದಿ ಮತ್ತು ಸರ್ಕಾರಿ ಆಸ್ಪತ್ರೆಯ ನರ್ಸ್ ಪುತ್ರನಾಗಿ ಜನಿಸಿ, ಕ್ರಿಕೆಟಿಗರ ಪಾಲಿನ ಪ್ರೀತಿಯ ‘ಜಡ್ಡು’ ಆಗಿ ಬೆಳೆದ ಜಡೇಜ ಸಾಧನೆ ಬೆರಗು ಮೂಡಿಸುವಂತಿದೆ.



ಭಾರತೀಯ ಟೆಸ್ಟ್ ಕ್ರಿಕೆಟಿಗ ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ವಿಶ್ವದ ಅತ್ಯಮೂಲ್ಯ ಆಟಗಾರರ ಪಟ್ಟಿಯಲ್ಲಿ ಎರಡನೇ ಸ್ಥಾನ ಗಳಿಸಿದ್ದಾರೆ. ಮೊದಲ ಸ್ಥಾನ ಸ್ಪಿನ್ ದಿಗ್ಗಜ ಶ್ರೀಲಂಕಾದ ಮುತ್ತಯ್ಯ ಮುರಳೀಧರನ್ ಹೆಸರಿನಲ್ಲಿದೆ. ಮೊದಲ ಎರಡೂ ಸ್ಥಾನಗಳಲ್ಲಿ ಸ್ಪಿನ್ನರ್‌ಗಳೇ ಇರುವುದು ವಿಶೇಷ.

## ಪೈಸೆಯಿಂದ ಕೋಟಿವರೆಗೆ

ಎಡಗೈ ಬ್ಯಾಟ್ಸ್‌ಮನ್ ಮತ್ತು ಸ್ಪಿನ್ನರ್ ಆಗಿರುವ ಜಡೇಜ 14 ವರ್ಷಗಳ ಹಿಂದೆ ಒಂದು ಸಾಧಾರಣ ಕಂಪನಿಯ ಕ್ರಿಕೆಟ್ ಬ್ಯಾಟ್‌ಗಾಗಿ, ಕಿಟ್‌ಗಾಗಿ ಹಣ ಹೊಂದಿಸಲು ಪರದಾಡುತ್ತಿದ್ದರು.



ಮಧ್ಯಮ ವರ್ಗದ ಅವರ ಕುಟುಂಬ ಆರ್ಥಿಕವಾಗಿ ಸಂಕಷ್ಟದಲ್ಲಿತ್ತು. ತಾಯಿ ಲತಾ ಜಾಮ್‌ನಗರದಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ನರ್ಸ್ ಆಗಿದ್ದರು.

ಇದೆಲ್ಲಕ್ಕಿಂತ ಹೆಚ್ಚಾಗಿ ಖಾಸಗಿ ಕಂಪನಿಯಲ್ಲಿ ಭದ್ರತಾ ಸಿಬ್ಬಂದಿಯಾಗಿದ್ದ ಜಡೇಜ ತಂದೆ ಅನಿರುದ್ಧ ಸಿನ್ಹಾ ಅವರಿಗೆ ಮಗನನ್ನು ಸೈನ್ಯಕ್ಕೆ ಸೇರಿಸಬೇಕು; ಅಲ್ಲಿ ದೊಡ್ಡ ಅಧಿಕಾರಿಯಾಗಿ ಮಾಡಬೇಕು ಎನ್ನುವ ಆಸೆಯಿತ್ತು. ಆದರೆ ಜಡೇಜ ಅವರ ಕನಸು, ಆಸೆ, ಆಸಕ್ತಿ ಎಲ್ಲವೂ ಕ್ರಿಕೆಟ್‌ನಲ್ಲಿತ್ತು. ಮಗನನ್ನು ಕ್ರಿಕೆಟ್‌ನಿಂದ ದೂರವಿಟ್ಟು ತಮ್ಮ ಆಸೆಯಂತೆ ಸೈನ್ಯಕ್ಕೆ ಕಳುಹಿಸಬೇಕು ಎಂದು ಅನಿರುದ್ಧ ಸಿನ್ಹಾ ಮೇಲಿಂದ ಮೇಲೆ ಪ್ರಯತ್ನಿಸುತ್ತಲೇ ಇದ್ದರು. ಆದರೆ ಜಡೇಜ ಸುತಾರಾಂ ಒಪ್ಪಲಿಲ್ಲ. 2005ರಲ್ಲಿ ಜಡೇಜ ಅವರ ತಾಯಿ ಲತಾ ಅಪಘಾತದಲ್ಲಿ ಮೃತಪಟ್ಟರು. ಆಗ ಜಡೇಜಗೆ 17 ವರ್ಷ.

ಅಮ್ಮನ ಸಾವಿನ ನೋವು ಮರೆಯುವ ಸಲುವಾಗಿ ಕ್ರಿಕೆಟ್‌ಗೆ ವಿದಾಯ ಹೇಳಿ ಅಪ್ಪನ ಆಸೆಯಂತೆ ಸೈನ್ಯಕ್ಕೆ ಸೇರಲು ಜಡೇಜ ನಿರ್ಧರಿಸಿದ್ದರು. ಅವರು ಈ ನಿರ್ಧಾರಕ್ಕೆ ಬರುವ ವೇಳೆಗಾಗಲೇ ಪೊಲೀಸ್ ಅಧಿಕಾರಿಯಾಗಿ ಕ್ರಿಕೆಟ್‌ನಲ್ಲಿ ಸ್ಥಳೀಯವಾಗಿ ಹೆಸರು ಮಾಡಿದ್ದ ಮಹೇಂದ್ರ ಸಿಂಗ್ ಚೌಹಾಣ್, ಜಡೇಜ ತಂದೆಯ ಮನವೊಲಿಸಿ ಕ್ರಿಕೆಟ್‌ನಲ್ಲಿಯೇ ಮುಂದುವರಿಯಲು ನೆರವಾದರು.

ಹೀಗೆ ವೃತ್ತಿಪರ ಕ್ರಿಕೆಟ್‌ಗೆ ಬರುವ ಮೊದಲೇ ಹಲವಾರು ಅಡೆತಡೆಗಳನ್ನು ಎದುರಿಸಿದ ಜಡೇಜ ಈಗ ವಿಶ್ವದ ಶ್ರೇಷ್ಠ ಆಲ್‌ರೌಂಡರ್‌ಗಳಲ್ಲೊಬ್ಬರಾಗಿ ಹೆಸರು ಮಾಡಿದ್ದಾರೆ. 2006ರಲ್ಲಿ ಪ್ರಥಮ ದರ್ಜೆ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. 2008ರಲ್ಲಿ 19 ವರ್ಷದ ಒಳಗಿನವರ ವಿಶ್ವಕಪ್ ಟೂರ್ನಿಯಲ್ಲಿ ಚಾಂಪಿಯನ್ ಆದ ಭಾರತ ತಂಡಕ್ಕೆ ಉಪನಾಯಕರಾಗಿದ್ದರು. ಈಗ 49 ಟೆಸ್ಟ್, 165 ಏಕದಿನ ಮತ್ತು 49 ಅಂತರರಾಷ್ಟ್ರೀಯ ಟಿ–20 ಪಂದ್ಯಗಳನ್ನಾಡಿದ್ದಾರೆ. ಆದರೂ, ಜಡೇಜ ಈಗಲೂ ನಾಲ್ಕು ಹಾಗೂ ಐದು ದಿನಗಳ ಪಂದ್ಯಗಳನ್ನಾಡಲು ಇಷ್ಟಪಡುತ್ತಾರೆ. ಇದಕ್ಕಾಗಿ ಮೇಲಿಂದ ಮೇಲೆ ರಣಜಿಯಂಥ ಪ್ರತಿಷ್ಠಿತ ದೇಶಿ ಟೂರ್ನಿಯಲ್ಲಿ ಆಡುತ್ತಾರೆ. ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಮೂರು ತ್ರಿಶತಕಗಳನ್ನು ಗಳಿಸಿದ ಭಾರತದ ಏಕೈಕ ಆಟಗಾರ ಎನ್ನುವ ಹೆಗ್ಗಳಿಕೆ ಕೂಡ ಜಡೇಜ ಹೆಸರಿನಲ್ಲಿದೆ.

ದೇಶಿ ಕ್ರಿಕೆಟ್‌ನಲ್ಲಿ ಜಡೇಜ ಹೊಂದಿರುವ ಪ್ರೀತಿ ಕಿರಿಯ ಆಟಗಾರರಿಗೂ ಇಷ್ಟವಾಗುತ್ತದೆ. ಜಡೇಜ ಇತ್ತೀಚೆಗೆ ಐಸಿಸಿ ಏಕದಿನ ಬೌಲರ್‌ಗಳ ರ್‍ಯಾಂಕಿಂಗ್ ಪಟ್ಟಿಯಲ್ಲಿ ಅಗ್ರಸ್ಥಾನ ಸಂಪಾದಿಸಿದ್ದರು. 1996ರಲ್ಲಿ ಅನಿಲ್ ಕುಂಬ್ಳೆ ಬಳಿಕ ಯಾವ ಬೌಲರ್‌ಗಳೂ ಕೂಡ ಈ ಸಾಧನೆ ಮಾಡಿರಲಿಲ್ಲ.

ಗುಣಮಟ್ಟದ ಒಂದು ಬ್ಯಾಟ್‌ಗಾಗಿ ಪರದಾಡುತ್ತಿದ್ದ ಜಡೇಜ ಈಗ ಬಿಸಿಸಿಐನಿಂದ ಬರುವ ಸಂಭಾವನೆ, ಜಾಹೀರಾತು ಆದಾಯ, ಸಾಮಾಜಿಕ ತಾಣಗಳಿಂದ ಗಳಿಸುವ ಹಣ ಹೀಗೆ ವರ್ಷಕ್ಕೆ ₹45ರಿಂದ ₹55 ಕೋಟಿ ಸಂಪಾದಿಸುತ್ತಾರೆ. ಬಿಸಿಸಿಐ ಗುತ್ತಿಗೆದಾರರ ಪಟ್ಟಿಯಲ್ಲಿರುವ ಕಾರಣ ಒಂದು ಟೆಸ್ಟ್ ಪಂದ್ಯಕ್ಕೆ ₹7 ಲಕ್ಷ, ಒಂದು ಏಕದಿನ ಪಂದ್ಯಕ್ಕೆ ₹4 ಲಕ್ಷ ಮತ್ತು ಒಂದು ಟಿ–20 ಪಂದ್ಯಕ್ಕೆ ₹2 ಲಕ್ಷ ಗಳಿಸುವ ಶ್ರೀಮಂತ ಕ್ರಿಕೆಟಿಗ.

ಕ್ರಿಕೆಟ್‌ನ ರಂಗುರಂಗಿನ ಲೋಕದಲ್ಲಿ ಮುಳುಗಿ ಹೋಗದೆ ಬೈಕ್ ಸವಾರಿ, ಫಾರ್ಮ್ ಹೌಸ್‌ಗಳಲ್ಲಿ ಕೆಲಸ ಮತ್ತು ಕುದುರೆ ಓಡಿಸುವುದನ್ನು ನಿಯಮಿತವಾಗಿ ಮಾಡುತ್ತಾರೆ. ಕುದುರೆ ಸವಾರಿ ಮೇಲಿನ ಅತಿಯಾದ ಪ್ರೀತಿಯಿಂದಾಗಿ ಕೈಗಳ ಮೇಲೆ ಕುದುರೆಗಳ ಟ್ಯಾಟು ಹಾಕಿಸಿಕೊಂಡಿದ್ದಾರೆ. ನಾಲ್ಕು ವರ್ಷಗಳ ಹಿಂದೆ ರಿವಾಬಾ ಸೋಲಂಕಿ ಅವರನ್ನು ಮದುವೆಯಾಗಿದ್ದು, ಮುದ್ದಾದ ಮಗಳಿದ್ದಾಳೆ.

31 ವರ್ಷದ ರವೀಂದ್ರ ಜಡೇಜ ಅವರ ಮನೆ, ಕ್ರಿಕೆಟ್‌ನ ವ್ಯವಹಾರಗಳು, ರೆಸ್ಟೋರೆಂಟ್ ಚಟುವಟಿಕೆಗಳು, ಫಾರ್ಮ್ ಹೌಸ್‌ನಲ್ಲಿ ಕೆಲಸ ಇವುಗಳನ್ನೆಲ್ಲ ನೋಡಿಕೊಳ್ಳಲು ನೂರಾರು ಜನ ಸಿಬ್ಬಂದಿ ಇದ್ದಾರೆ. 15 ವರ್ಷಗಳ ಹಿಂದೆ ಕುಟುಂಬಕ್ಕಾಗಿ ಹಗಲಿರುಳು ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದ ಅನಿರುದ್ಧ ಸಿನ್ಹಾ ಅವರಿಗೆ ಮಗ ಜಡೇಜ ಊಟದ ಡಬ್ಬಿ ಕೊಡಲು ಹೋಗುತ್ತಿದ್ದರು. ಈಗ ಅವರೇ ನೂರಾರು ಕುಟುಂಬಗಳಿಗೆ ಆಶ್ರಯ ನೀಡುವಷ್ಟರ ಮಟ್ಟಿಗೆ ಹಣ, ಹೆಸರು, ಕೀರ್ತಿ ಸಂಪಾದಿಸಿದ್ದಾರೆ. ಮಧ್ಯಮ ವರ್ಗದ ಕುಟುಂಬದಿಂದ ಒಂದು ಇಲ್ಲಿಯವರೆಗೆ ಬೆಳೆದು ನಿಂತ ಜಡೇಜ ಜೀವನ ಎಂಥ ಕಷ್ಟದಲ್ಲಿರುವವರಿಗೂ ಸ್ಫೂರ್ತಿಯಾಗುವಂತಿದೆ.